ಉ) ಸೌರಶಕ್ತಿ ಬೇಲಿ ಅಳವಡಿಸಲು ಪ್ರತಿ ಕಿ.ಮೀ.ಗೆ ರೂ.1.50 ಲಕ್ಷ ವೆಚ್ಚ ತಗಲುತ್ತದೆ.

ಊ) ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನಕ್ಕೆ ಹೊಂದಿಕೊಂಡಿರುವ ಪ್ರದೇಶಗಳಲ್ಲಿ ಆನೆಗಳ ಹಾವಳಿಯಿಂದ ಕಳೆದ 3 ವರ್ಷಗಳಲ್ಲಿ ನಷ್ಟ ಹೊಂದಿದ ಹಾಗೂ ಸಾವನ್ನಪ್ಪಿದ ಕುಟುಂಬಗಳಿಗೆ ಸರ್ಕಾರ ನೀಡಿರುವ ಪರಿಹಾರ ಈ ಕಳಕಂಡಂತಿದೆ.

ವರ್ಷ	ಮೃತರ ಸಂಖ್ಯೆ	ನೀಡಲಾದ ಪರಿಹಾರ (ರೂ.ಗಳಲ್ಲಿ)	ಬೆಳೆ ನಷ್ಟ ಮತ್ತು ಇತರೆ ಪ್ರಕರಣಗಳು	ನೀಡಲಾದ ಪರಿಹಾರ (ರೂ.ಲಕ್ಷಗಳಲ್ಲಿ)
2002–03	1	1,00,00	1201	16.79
2003–04	1	1,00,00	855	6.30
2004–05	4	4,00,000	1050	13.49

4806(5326) ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರದಲ್ಲಿ ಲೋಕೋಪಯೋಗಿ ಇಲಾಖೆ ಕೈಗೊಂಡಿರುವ ವಿವಿಧ ಕಾಮಗಾರಿಗಳು ಯಾವುವು:

ಆ) ಈ ಕಾಮಗಾರಿಯು ಯಾವಾಗ ಪ್ರಾರಂಭವಾಯಿತು. ಹಾಗೂ ಪ್ರತಿಯೊಂದು ಕಾಮಗಾರಿಗಳ ಪ್ರಗತಿಯನ್ನು ವಿವರಿಸುವುದು;

ಇ) 2005–06ನೇ ಸಾಲಿನಲ್ಲಿ ಹೊಸದಾಗಿ ಬೆಂಗಳೂರು ನಗರದಲ್ಲಿ ಕೈಗೊಂಡ ಕಾಮಗಾರಿಗಳು ಯಾವುವು;

ಈ) ಈ ಕಾಮಗಾರಿಗಳ ಅಂದಾಜು ವೆಚ್ಚ ಹಾಗೂ ಪೂರ್ಣಗೊಳ್ಳುವ ದಿನಾಂಕ ಯಾವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಬೆಂಗಳೂರು ನಗರದಲ್ಲಿ ಲೋಕೋಪಯೋಗಿ ಇಲಾಖೆಯಿಂದ ಒಟ್ಟು 25 ಕಾಮಗಾರಿಗಳನ್ನು ಕೈಗೊಂಡಿದ್ದು ವಿವರಗಳನ್ನು ಅನುಬಂಧ–ಎ ನಲ್ಲಿ ನೀಡಲಾಗಿದೆ.

ಆ) ವಿವರಗಳನ್ನು ಅನುಬಂಧ–ಎ ನಲ್ಲಿ ನೀಡಲಾಗಿದೆ.

ಇ) ಬೆಂಗಳೂರು ನಗರದಲ್ಲಿ ಲೋಕೋಪಯೋಗಿ ಇಲಾಖೆಯಿಂದ 2005–06ನೇ ಸಾಲಿನಲ್ಲಿ ಹೊಸದಾಗಿ ಒಟ್ಟು 22 ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದ್ದು ಈ ಕಾಮಗಾರಿಗಳ ವಿವರಗಳನ್ನು ಅನುಬಂಧ–ಬಿ ನಲ್ಲಿ ನೀಡಲಾಗಿದೆ.

ಈ) ವಿವರಗಳನ್ನು ಅನುಬಂಧ–ಬಿ ನಲ್ಲಿ ನೀಡಲಾಗಿದೆ.

ಅನುಬಂಧ–ಎ

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿ ನಗರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 5326ಕ್ಕೆ ಉತ್ತರ.

ಬೆಂಗಳೂರು ನಗರದಲ್ಲಿ ಲೋಕೋಪಯೋಗಿ ಇಲಾಖೆ ಕಟ್ಟಡಗಳ ವೃತ್ತದ ವ್ಯಾಪ್ತಿಯಲ್ಲಿ ಕೈಗೊಂಡಿರುವ ಆಯವ್ಯಯ ಕಾಮಗಾರಿಗಳ ಪ್ರಗತಿ ವಿವರ

ರೂ. ಲಕ್ಷಗಳಲ್ಲಿ

ಕ್ರ ಸಂ.	ಲೆಕ್ಕ ಶೀರ್ಷಿಕೆ ಮತ್ತು ಕಾಮಗಾರಿಗಳ ವಿವರ / ಹೆಸರು	ಕಾಮಗಾರಿ ಪ್ರಾರಂಭ ದಿನಾಂಕ	ತಿಂಗಳ ಅಂತ್ಯಕ್ಕೆ (30.6.05) ಒಟ್ಟು ಆರ್ಥಿಕ ಪ್ರಗತಿ	ಕಾಮಗಾರಿಯ ಪ್ರಗತಿ ವಿವರ
	ನಂ.1ನೇ ಕಟ್ಟಡಗಳ ವಿಭಾಗ			
1	ವಿಕಾಸ ಸೌಧ ನಿರ್ಮಾಣ	29–8–01	10699.68	ವಿಕಾಸಸೌಧ ನಿರ್ಮಾಣ ಕಾಮಗಾರಿಯ ಮೂಲ ಗುತ್ತಿಗೆ ಕರಾರಿನ ಪ್ರಕಾರ ದಿನಾಂಕ 31.8.04ರ ಒಳಗೆ ಪೂರ್ಣಗೊಳ್ಳಬೇಕಾಗಿತ್ತು. ಮೂಲ ಗುತ್ತಿಗೆ ಕಾಮಗಾರಿಗಳಲ್ಲದೆ, ಪೀಠೋಪಕರಣ, ಲ್ಯಾನ್, ಸೌರಶಕ್ತಿ ಬಳಕೆ, ವಿದ್ಯುತ್ ಫೀಡರ್ ಲೈನ್, ರಸ್ತೆ ನಿರ್ಮಾಣ, ಕ್ಯಾಪ್‌ಸೂಲ್ ಲಿಫ್ಟ್, ಸುರಂಗಮಾರ್ಗ,

				ಮಳೆ ನೀರಿನ ಮೋರಿ (ರ‍್ಯಾಮಿಚಿಟ್ ಮೆಥೆಡ್) ಇದಲ್ಲದೆ ನಿರ್ಮಾಣ ಹಂತದಲ್ಲಿ ಒಳಾಂಗಣ ವಿನ್ಯಾಸವನ್ನು ಎನ್‌ಐಡಿ ಸಂಸ್ಥೆಗೆ ವಹಿಸಿದ್ದು, ಇವರು ಸೂಚಿಸಿರುವ ಬದಲಾವಣೆ ಹಾಗೂ ಮಾರ್ಪಾಡು ಗಳನ್ನು ಅಳವಡಿಸಲಾಯಿತು ಇವೆಲ್ಲದರ ನಿರ್ಮಾಣದ ಪ್ರಯುಕ್ತ ವಿಳಂಬಕ್ಕೆ ಕಾರಣಗಳಾಗಿದ್ದು ಸೆಪ್ಟೆಂಬರ್ 2005ರ ಒಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಮೂಲ ಕಟ್ಟಡದ ಕಾಮಗಾರಿಗಳು ಪೂರ್ಣಗೊಂಡಿದ್ದು ಈಗಾಗಲೇ ಲೋಕೋಪಯೋಗಿ ಇಲಾಖೆಯನ್ನು ಸ್ಥಳಾಂತರಿಸಲಾಗಿರುತ್ತದೆ. ಹಾಗೂ ಇತರೆ ಇಲಾಖೆಗಳನ್ನು ಹಂತ ಹಂತವಾಗಿ ಸದ್ಯದಲ್ಲಿಯೇ ಸ್ಥಳಾಂತರಿಸಲಾಗುವುದು.
2	ವಿಧಾನಸೌಧ ಸುತ್ತಲೂ ಭದ್ರತಾ ಗ್ರಿಲ್ ಬೇಲಿ ಒದಗಿಸುವ ಕಾಮಗಾರಿ	29–11–02	205.30	ಮೂಲ ಗುತ್ತಿಗೆ ಪ್ರಕಾರ ದಿನಾಂಕ 28–5–03 ರಂದು ಕಾಮಗಾರಿ ಯನ್ನು ಪೂರ್ಣಗೊಳಿಸ ಬೇಕಾಗಿತ್ತು, ಅನಿವಾರ್ಯ ಕಾರಣಗಳಿಂದ

				ಕೆಲವು ಬದಲಾವಣೆಗಳಿಂದಾಗಿ ಕಾಮಗಾರಿಯು ವಿಳಂಬವಾಗಿದ್ದು ಪೂರ್ವ, ಪಶ್ಚಿಮ ಮತ್ತು ಆಗ್ನೇಯ ದಿಕ್ಕಿನ ಮುಖ್ಯ ದ್ವಾರ ಗೇಟುಗಳ ನಿರ್ಮಾಣ ಮುಗಿದಿದ್ದು, ನೈರುತ್ಯ ದಿಕ್ಕಿನ ದ್ವಾರಗಳನ್ನು ನಿರ್ಮಿಸಬೇಕಾಗಿರುತ್ತದೆ. ಸರ್ಕಾರಿ ಮುದ್ರಣಾಲಯದ ಕಟ್ಟಡವನ್ನು ನೆಲಸಮಗೊಳಿಸಿ ನಂತರ ಉಳಿಕೆ ಗ್ರಿಲ್ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.
3	ಕರ್ನಾಟಕ ಲೋಕಸೇವಾ ಆಯೋಗದ ಆಡಳಿತ ಕಛೇರಿ ಕಟ್ಟಡ	8–3–02	1011.60	ಕಾಮಗಾರಿಯು ಮುಕ್ತಾಯ ಹಂತದಲ್ಲಿದ್ದು ಛಾವಣಿಯ ಕಲ್ಲು ಕೆಲಸ ಪ್ರಗತಿಯಲ್ಲಿದೆ. ಕಟ್ಟಡದ ಸುತ್ತಲಿನ ರಸ್ತೆಯ ಕೆಲಸ ಪ್ರಗತಿಯಲ್ಲಿದೆ. ಒಳಾಂಗಣ ವಿದ್ಯುತ್ ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದ್ದು, 02 ಸಂಖ್ಯೆ ಲಿಫ್ಟ್ ಹಾಗೂ 1 ಸಂಖ್ಯೆ ವಿದ್ಯುತ್ ಪರಿವರ್ತಕಗಳನ್ನು ಅನುವುಗೊಳಿಸಲಾಗಿದೆ.
4	ಶಾಸಕರ ಭವನದಲ್ಲಿ 4ನೇ ಹಂತದಲ್ಲಿ 66 ಸಾಂಸಾರಿಕ ಕೊಠಡಿಗಳ	1–10–03	244.56	ಕಾಮಗಾರಿ ಪ್ರಗತಿಯಲ್ಲಿದ್ದು, ಲಿಫ್ಟ್ ರೂಂಗೆ ಕಾಂಕ್ರೀಟ್ ಹಾಕಲು ಸೆಂಟರಿಂಗ್ ಕೆಲಸ ಪ್ರಗತಿಯಲ್ಲಿದೆ. ಸ್ಟೀಲ್

	ನಿರ್ಮಾಣ (2ನೇ ಹಂತದಲ್ಲಿ)			ಫ್ಯಾಬ್ರಿಕೇಶನ್ ಕೆಲಸ ಹಾಗೂ 1 ರಿಂದ 4ನೇ ಮಹಡಿಗಳಲ್ಲಿ ಮಡ್ಡಿ ಮತ್ತು ನೆಲಹಾಸುವಿಗೆ ಮೊಸಾಯಿಕ್ ಟೈಲ್ಸ್ ಕೆಲಸ ಪ್ರಗತಿಯಲ್ಲಿದೆ. ಹೊರಗಡೆ ಮಡ್ಡಿ ಕೆಲಸ ಮಾಡಲು ಸಾರುವೆ ಮರಗಳನ್ನು ಹಾಕಲಾಗುತ್ತಿದೆ ಹಾಗೂ ಬಾಗಿಲುಗಳ ಕೆಲಸ ಪ್ರಗತಿಯಲ್ಲಿದೆ.
5	ಶಾಸಕರ ಭವನದ ಹಳೆ ಕಟ್ಟಡದಲ್ಲಿ ಜೀರ್ಣೋದ್ಧಾರ ಕಾಮಗಾರಿ (ಬದಲಾವಣೆ ಮತ್ತು ಮಾರ್ಪಾಡು)	30-6-03	452.21	ಕಾಮಗಾರಿ ಪ್ರಗತಿಯಲ್ಲಿದ್ದು, ಉಳಿದ 3ನೇ ಮತ್ತು 4ನೇ ಮಹಡಿಯಲ್ಲಿ ಒಟ್ಟು 16 ಕೊಠಡಿಗಳಲ್ಲಿ ಫಿನಿಷಿಂಗ್ ಕಾಮಗಾರಿಗಳು ಮುಗಿಯುವ ಹಂತದಲ್ಲಿರುತ್ತದೆ. ಎರಡನೇ ಮಹಡಿಯಲ್ಲಿ ಒಂದು ಕೊಠಡಿ ಹಾಗೂ ನೆಲ ಮಹಡಿಯಲ್ಲಿ ಒಂದು ಕೊಠಡಿಯನ್ನು ಪೂರ್ಣಗೊಳಿಸಿ ಹಸ್ತಾಂತರಿಸಲಾಗುವುದು.
6	ನವದೆಹಲಿಯ ಕರ್ನಾಟಕ ಭವನ ನೌಕರರುಗಳಿಗೆ ವಸತಿಗೃಹ ನಿರ್ಮಾಣ ಕಾಮಗಾರಿ (ಮೊದಲನೇ ಮಹಡಿ)	29-11-01	191.07	ಕಾಮಗಾರಿ ಪ್ರಗತಿಯಲ್ಲಿದ್ದು, ನೀರು ಸರಬರಾಜು ಮತ್ತು ನೈರ್ಮಲೀಕರಣ ಕಾಮಗಾರಿಗಳು ಮುಗಿಯುವ ಹಂತದಲ್ಲಿದ್ದು ಉಳಿಕೆ ಎಲ್ಲಾ ಕಾಮಗಾರಿ ಕೆಲಸ ಪೂರ್ಣಗೊಂಡಿದೆ.

	ಇಎಸ್‌ಐ ಕಟ್ಟಡಗಳ ವಿಭಾಗ			
7	ಕರ್ನಾಟಕ ಉಚ್ಚ ನ್ಯಾಯಾಲಯ ಕಟ್ಟಡದ ಮಧ್ಯಭಾಗದ ನೆಲಮಹಡಿಯಲ್ಲಿ ಗ್ರಂಥಲಯ ನವೀಕರಣ ಕಾಮಗಾರಿ	ಜನವರಿ 04	105.00	ಕಾಮಗಾರಿಯು ಮುಕ್ತಾಯದ ಹಂತದಲ್ಲಿದೆ
8	ಬೆಂಗಳೂರಿನ ಸಿಟಿ ಸಿವಿಲ್ ನ್ಯಾಯಾಲಯ ಸಂಕೀರ್ಣದಲ್ಲಿ 4, 5 ಮತ್ತು 6ನೇ ಮಹಡಿ ಕಟ್ಟಡ ನಿರ್ಮಾಣ ಕಾಮಗಾರಿ (2ನೇ ಹಂತ) 2 ಎಲಿವೇಟರ್	29–1–02	265.68	ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ ಲಿಫ್ಟ್ ಕಾಮಗಾರಿ ಪ್ರಗತಿಯಲ್ಲಿದೆ.
9	ಬೆಂಗಳೂರಿನ ಸಿಟಿ ಸಿವಿಲ್ ಕೋರ್ಟ್ ಕಟ್ಟಡದ ಮೊದಲನೇ ಹಂತದ ಹಿಂಭಾಗದ ನೆಲಮಹಡಿಯಲ್ಲಿ ಕಾರ್ ಪಾರ್ಕಿಂಗ್ ಕಟ್ಟಡ ನಿರ್ಮಾಣ ಕಾಮಗಾರಿಯೊಂದಿಗೆ 9 ಅಂತಸ್ತುಗಳಿಗೆ ತಳಪಾಯದ ಕಾಮಗಾರಿ	22–12–04	271.90	ತಳಪಾಯಕ್ಕೆ ಕಾಂಕ್ರೀಟ್ ಹಾಕುವ ಕಾಮಗಾರಿ ಪೂರ್ಣಗೊಂಡಿದ್ದು ಬೇಸ್‌ಮೆಂಟ್ ಅಂತಸ್ತಿನಲ್ಲಿ ಆರ್‌ಸಿಸಿ ಕಂಬಗಳ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು ಆರ್‌ಸಿಸಿ ಛಾವಣಿಗೆ ಕಾಂಕ್ರೀಟ್ ಹಾಕಲು ಎಲ್ಲಾ ಸಿದ್ಧತೆಗಳನ್ನು ಮಾಡಲಾಗುತ್ತಿದೆ.
10	ಬೆಂಗಳೂರಿನ ಸಿಟಿ ಸಿವಿಲ್ ಕೋರ್ಟ್ ಕಟ್ಟಡದ	24–1–05	0.12	ಕಾಮಗಾರಿ ಪ್ರಗತಿಯಲ್ಲಿದೆ.

	ನೆಲಮಹಡಿಯಲ್ಲಿ ಮತ್ತು ಮೂರು ಮಹಡಿಗಳಲ್ಲಿ ಛಾಪಾ ಕಾಗದ ಮಾರಾಟಗಾರಿಗೆ ಮಳಿಗೆಗಳನ್ನು ನಿರ್ಮಾಣ ಹಾಗೂ ಅಡ್ವೋಕೇಟ್ಸ್ ಕ್ಯುಬಿಕಲ್ಸ್ ನಿರ್ಮಾಣ ಕಾಮಗಾರಿ ಮತ್ತು ಲಿಫ್ಟ್‌ಗಳನ್ನು ಅಳವಡಿಸುವ ಕಾಮಗಾರಿ			
11	ಬೆಂಗಳೂರಿನ ಸಿಟಿ ಸಿವಿಲ್ ಕೋರ್ಟ್ ಕಟ್ಟಡದ ಸುತ್ತಲೂ ಡಬಲ್ ರೋಡ್ ನಿರ್ಮಾಣ (ಮೀಡಿಯನ್, ಡ್ರೈನ್ಸ್ ಮತ್ತು ಎಲೆಕ್ಟ್ರಿಕೇಷನ್ ಕಾಮಗಾರಿಗಳು ಸೇರಿ)	16–5–05	–	ರಸ್ತೆ ಬದಿಯ ಮೋರಿ ನಿರ್ಮಿಸುವ ಕಾಮಗಾರಿಯ ಮಣ್ಣಿನ ಕೆಲಸ ಪ್ರಗತಿಯಲ್ಲಿದೆ.
12	ಬೆಂಗಳೂರು ನಗರ ಸಿವಿಲ್ ಕೋರ್ಟ್ ಕಟ್ಟಡದಲ್ಲಿ 20 ಜನ ಸಾಮರ್ಥ್ಯವುಳ್ಳ 2 ಹೆಚ್ಚುವರಿ ಎಲಿವೇಟರುಗಳನ್ನು ಸರಬರಾಜು ಮಾಡಿ ಅಳವಡಿಸಿ ಹಾಗೂ ಚಾಲನೆ ನೀಡುವ	7–1–05	–	ಸಿವಿಲ್ ಕಾಮಗಾರಿಗಳಾದ ಲಿಫ್ಟ್ ಗೋಡೆಗಳನ್ನು ಕಟ್ಟುವ ಕಾಮಗಾಖುಇ ಪ್ರಗತಿಯಲ್ಲಿದೆ.

	ಕಾಮಗಾರಿ (ಸಿವಿಲ್ ಕಾಮಗಾರಿಗಳು ಸೇರಿ)			
13	ಬೆಂಗಳೂರಿನ ಅಶೋಕ ನಗರದಲ್ಲಿ ಪೊಲೀಸ್ ಠಾಣೆ ಕಟ್ಟಡ ಕಾಮಗಾರಿ	7–7–04	45.29	ನೆಲಹಾಸು ಕೆಲಸ ಪ್ರಗತಿಯಲ್ಲಿದೆ.
14	ಬೆಂಗಳೂರಿನ ನೃಪತುಂಗ ರಸ್ತೆಯಲ್ಲಿರುವ ಡಿಜಿಪಿ ರವರ ಕಛೇರಿಗೆ ಲಿಫ್ಟ್ ಅಳವಡಿಸುವ ಕಾಮಗಾರಿ	15–1–05	25.81	ಕಾಮಗಾರಿ ಪ್ರಗತಿಯಲ್ಲಿದೆ.
15	ಬೆಂಗಳೂರಿನ ಕೋರಮಂಗಲದ ಟ್ಯಾಂಕ್ ಬೆಡ್ ಏರಿಯಾ ಸ್ವಾಧೀನ ಪಡಿಸಿಕೊಂಡಿರುವುದಕ್ಕೆ ಹಣ ಪಾವತಿಸುವ ಬಗ್ಗೆ		6.70	ಬೆಂಗಳೂರು ಪ್ರಾಣಿ ಆಹಾರ ನಿಗಮ (BAFCO) ರವರಿಂದ ಜಮೀನು ಖರೀದಿಗಾಗಿ ರೂ. 50.00 ಲಕ್ಷ ಅಂದಾಜು ತಯಾರಿಸಲಾಗಿದೆ. ಈ ಜಮೀನು ಒತ್ತುವರಿ ತಡೆಯಲು ಕಾಂಪೌಂಡು ನಿರ್ಮಾಣ ಕಾಮಗಾರಿಗಾಗಿ ರೂ. 6.70 ಲಕ್ಷ ವೆಚ್ಚ ಮಾಡಲಾಗಿದೆ. BAFCO ರವರಿಗೆ ರೂ. 50.00 ಲಕ್ಷ ಪಾವತಿಸಬೇಕಾಗಿದ್ದು ಸರ್ಕಾರದಿಂದ ಹಣ ಭರವಸೆ ಪತ್ರ ನಿರೀಕ್ಷಿಸಲಾಗಿದೆ.
16	ಬೆಂಗಳೂರಿನ ಮುಖ್ಯ ಇಂಜಿನಿಯರ್ ಸಂಪರ್ಕ ಮತ್ತು	24–8–05	14.24	4ನೇ ಮಹಡಿಗೆ ಬಣ್ಣ ಬಳಿಯುವ ಹಾಗೂ

	ಕಟ್ಟಡಗಳು (ದ) ಇಲ್ಲಿಯ ಆವರಣದಲ್ಲಿ ಲೋಕೋಪಯೋಗಿ ಪೂರಕ ಕಟ್ಟಡದ ವಿಸ್ತರಣಾ ಕಟ್ಟಡ (ಲೋಕೋಪಯೋಗಿ ಇಲಾಖೆ ಕಛೇರಿಗಳಿಗೆ ಸ್ಥಳಾವಕಾಶ ಕಲ್ಪಿಸುವ ಸಲುವಾಗಿ)			ನೆಲಹಾಸು ಅಳವಡಿಸುವ ಕಾಮಗಾರಿ ಪ್ರಗತಿಯಲ್ಲಿದೆ.
17	ಬೆಂಗಳೂರಿನ ಕೆಂಚೇನಹಳ್ಳಿಯಲ್ಲಿ ಇರುವ ಹೊರವಲಯ ಮುದ್ರಣಾಲಯದ ಆವರಣದಲ್ಲಿ ಕೇಂದ್ರ ಮುದ್ರಣಾಲಯದ ಕಾಮಗಾರಿ ಹಾಗೂ	23-1-02	212.85	ಸದರಿ ಕಾಮಗಾರಿಗೆ ದಿ: 9-11-04 ರಂದು ಗುತ್ತಿಗೆಯನ್ನು ರದ್ದು ಪಡಿಸಲಾಗಿರುತ್ತದೆ. ಉಳಿಕೆ ಕೆಲಸಕ್ಕೆ ಟೆಂಡರ್ ಆಹ್ವಾನಿಸಲಾಗಿದೆ.
	ಬೆಂಗಳೂರಿನ ಕೆಂಚೇನಹಳ್ಳಿಯಲ್ಲಿ ಇರುವ ಹೊರವಲಯ ಮುದ್ರಣಾಲಯದ ಆವರಣದಲ್ಲಿ ವಸತಿಗೃಹ ನಿರ್ಮಾಣ ಕಾಮಗಾರಿ	31-2-02	81.20	ಸಿವಿಲ್ ಕಾಮಗಾರಿ ಮುಗಿದಿದ್ದು ವಿದ್ಯುತ್ ಕಾಮಗಾರಿ ಪ್ರಗತಿಯಲ್ಲಿದೆ.
18	ಮುಟ್ಟುಗೋಲು ಹಾಕಿರುವ ವಸ್ತುಗಳು ಹಾಗೂ ವಾಹನಗಳನ್ನು ಇಡುವುದಕ್ಕೆ ಉಗ್ರಾಣ ನಿರ್ಮಾಣ ಹಾಗೂ ಅಬ್ಕಾರಿ ಇಲಾಖೆ		–	ಮುಟ್ಟುಗೋಲು ಹಾಕಿರುವ ವಸ್ತುಗಳು ಹಾಗೂ ವಾಹನಗಳನ್ನು ಇಡುವುದಕ್ಕೆ ಉಗ್ರಾಣ ನಿರ್ಮಾಣ ಹಾಗೂ ಅಬ್ಕಾರಿ ಇಲಾಖೆಗೆ ಎಲ್ಲಾ ರೇಂಜ್ ಆಫೀಸ್ ಕಟ್ಟಡ ನಿರ್ಮಾಣ ಮಾಡುವ

	ಎಲ್ಲಾ ರೇಂಜ್ ಅಪೀಸ್ ಕಟ್ಟಡ ನಿರ್ಮಾಣ			ಸಲುವಾಗಿ ನಿವೇಶನವನ್ನು ಕೊಂಡುಕೊಳ್ಳಲು ಅನುದಾನವನ್ನು ನೀಡಿರುತ್ತಾರೆ. ಈ ಬಗ್ಗೆ ಅಬಕಾರಿ ಇಲಾಖೆಯವರು ನಿವೇಶನವನ್ನು ಗುರುತಿಸ ಬೇಕಾಗಿದೆ.
19	ಬೆಂಗಳೂರಿನ ಬನಶಂಕರಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ತರಬೇತಿ ಸಂಸ್ಥೆಗಾಗಿ ನೂತನ ಕಟ್ಟಡ ನಿರ್ಮಾಣ ಕಾಮಗಾರಿ	28–3–05	5.31	ಪಾಯದ ಕೆಲಸ ಪ್ರಗತಿಯಲ್ಲಿದೆ.
20	ಬೆಂಗಳೂರಿನ ಜೆಬಿ ನಗರದಲ್ಲಿ ಲೋಕೋಪಯೋಗಿ ಇಲಾಖೆಯ ವಸತಿಗೃಹಗಳ ನಿರ್ಮಾಣ ಕಾಮಗಾರಿ	3–2–99	15.27	ಗುತ್ತಿಗೆದಾರರು ಕಾಮಗಾರಿಯನ್ನು ಸಂಪೂರ್ಣವಾಗಿ ನಿಲ್ಲಿಸಿದ್ದು ಗುತ್ತಿಗೆಯನ್ನು ರದ್ದುಪಡಿಸಲು ಮೇಲಧಿಕಾರಿಗಳಿಗೆ ಕೋರಲಾಗಿದೆ. ಉಳಿಕೆ ಕಾಮಗಾರಿಯ ಅಂದಾಜು ಪಟ್ಟಿಯನ್ನು ತಯಾರಿಸಿ ಅನುಮೋದನೆಗಾಗಿ ಸಲ್ಲಿಸಲಾಗಿರುತ್ತದೆ. ಗುತ್ತಿಗೆದಾರರು ನ್ಯಾಯಾಲಯದಲ್ಲಿ ದಾವೆ ಹೂಡಿದ್ದು ದಾವೆ ಇತ್ಯರ್ಥವಾಗಬೇಕಾಗಿರುತ್ತದೆ. ಮುಂದಿನ ಹಿಯರಿಂಗ್ ದಿ:30–7–05 ರಂದು ಇರುವುದಾಗಿ ತಿಳಿದುಬಂದಿದೆ.

21	ಬೆಂಗಳೂರಿನ ಎನ್‌ಜಿಹೆಚ್‌ಸಿ ಕೋರಮಂಗಲದಲ್ಲಿ ನ್ಯಾಯಾಲಯ, ಕೃಷ್ಣ ಮತ್ತು ಶರಾವತಿ ಬ್ಲಾಕ್‌ಗಳಿಗೆ ಚೈನ್ ಲಿಂಕ್ ಪ್ರೊಟೆಕ್ಷನ್ ಕಾಮಗಾರಿ	28.2.04	55.26	ಕಾಮಗಾರಿ ಪೂರ್ಣಗೊಂಡಿದೆ. ಅಂತಿಮ ಬಿಲ್ ಸ್ವೀಕರಿಸಲಾಗಿದೆ.
22	ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯಲ್ಲಿ ಕಾರ್ಮಿಕ ಭವನ 3ನೇ ಹಂತ ಕಟ್ಟಡದ ನಿರ್ಮಾಣ ಕಾಮಗಾರಿ	15.3.02	57.66	ಕಾಮಗಾರಿ ಪ್ರಗತಿಯಲ್ಲಿದ್ದು 2005-06ನೇ ಸಾಲಿಗೆ ಅನುದಾನ ಕೋರಲಾಗಿದೆ.
23	ಬೆಂಗಳೂರಿನ ಜೆಸಿ ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ಕನ್ನಡ ಭವನದ ಚಾಲುಕ್ಯ ಬ್ಲಾಕ್ ನಿರ್ಮಾಣ ಕಾಮಗಾರಿ	15.3.02	135.97	ಕಾಮಗಾರಿ ಪೂರ್ಣ ಗೊಂಡಿದ್ದು, ಉಳಿಕೆ ಬಿಲ್ ಪಾವತಿಗಾಗಿ 2005-06ನೇ ಸಾಲಿಗೆ ಅನುದಾನ ಕೋರಲಾಗಿದೆ.
24	ಬೆಂಗಳೂರು ನಗರದ ಇನ್‌ಫೆಂಟ್ರಿ ರಸ್ತೆಯಲ್ಲಿ ವಾರ್ತಾ ಭವನ ಕಟ್ಟಡ ನಿರ್ಮಾಣ	14.3.02	251.15	ವಾರ್ತಾ ಭವನ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ದಿನಾಂಕ 14.3.2002 ರಂದು ಪ್ರಾರಂಭಿಸಲಾಗಿದ್ದು ನೆಲಮಹಡಿ, ಮೊದಲನೇ ಮಹಡಿ, 2ನೇ ಮಹಡಿ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿದ್ದು

				3ನೇ ಮಹಡಿಯ ಆರ್‌ಸಿಸಿ ಕಂಬಗಳನ್ನು ಭಾಗಶ: ನಿರ್ಮಿಸಲಾಗಿದೆ. ಅನುದಾನ ಕೊರತೆಯಿಂದಾಗಿ ಪ್ರಗತಿಯು ಸ್ಥಗಿತಗೊಂಡಿದೆ.
25	ಬೆಂಗಳೂರು ನಗರದ ಮಲ್ಲೇಶ್ವರಂನ 18ನೇ ಅಡ್ಡರಸ್ತೆಯಲ್ಲಿ ಪದವಿಪೂರ್ವ ಶಿಕ್ಷಣ ಇಲಾಖಾ ಕಟ್ಟಡ ನಿರ್ಮಾಣ	25.5.94	162.54	ಪದವಿಪೂರ್ವ ಶಿಕ್ಷಣ ಇಲಾಖಾ ಕಟ್ಟಡ ನಿರ್ಮಾಣದ ಕಾಮಗಾರಿಯನ್ನು ದಿ: 25.5.1994 ರಲ್ಲಿ ಪ್ರಾರಂಭಿಸಲಾಗಿದ್ದು, ಕಾಮಗಾರಿಯು ಭೌತಿಕವಾಗಿ ಪೂರ್ಣಗೊಂಡಿರುತ್ತದೆ.

ಅನುಬಂಧ–ಬಿ

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 5326ಕ್ಕೆ ಉತ್ತರ

ಬೆಂಗಳೂರು ನಗರದಲ್ಲಿ ಲೋಕೋಪಯೋಗಿ ಇಲಾಖೆ ಕಟ್ಟಡಗಳ ವೃತ್ತದ ವ್ಯಾಪ್ತಿಯಲ್ಲಿ 2005–06ನೇ ಸಾಲಿನ ಹೊಸ ಕಾಮಗಾರಿಗಳು

ರೂ.ಲಕ್ಷಗಳಲ್ಲಿ

ಕ್ರ ಸಂ.	ಕಾಮಗಾರಿಯ ಹೆಸರು	ಅಂದಾಜು ವೆಚ್ಚ	ಷರಾ
	ನಂ.1ನೇ ಕಟ್ಟಡಗಳ ವಿಭಾಗ		
1	ಬೆಂಗಳೂರಿನ ಬಹುಮಹಡಿ ಕಟ್ಟಡದ 5ನೇ ಹಂತಕ್ಕೆ ಅಗ್ನಿಶಾಮಕ ಸಿಸ್ಟಮ್ ಒದಗಿಸುವ ಕಾಮಗಾರಿ	25.50	ಕಾಮಗಾರಿಯನ್ನು ದಿನಾಂಕ 17.3.05 ರಂದು ಪ್ರಾರಂಭಿಸಿ ದಿ:30.5.05 ರಲ್ಲಿ ಪೂರ್ಣಗೊಳಿಸಲಾಗಿದೆ. ಭಾಗಶ: ಬಿಲ್ ಪಾವತಿಯಾಗ ಬೇಕಾಗಿದೆ.

2	ಬೆಂಗಳೂರು ಬಹುಮಹಡಿ ಕಟ್ಟಡದ 1ನೇ ಹಂತಕ್ಕೆ ಎಲಿವೇಟರ್ಸ್ ಒದಗಿಸುವುದು, ಸ್ಥಾಪಿಸುವುದು, ಪರೀಕ್ಷಿಸಿ ಹಾಗೂ ಅನುವುಗೊಳಿಸುವುದು.	40.00	ಅಂದಾಜು ಪಟ್ಟಿ ತಯಾರಿಕೆ ಹಂತದಲ್ಲಿದ್ದು, ಈ ಕಾಮಗಾರಿಯನ್ನು ಸುಮಾರು 12 ತಿಂಗಳಲ್ಲಿ ಪೂರ್ಣ ಗೊಳಿಸಲಾಗುವುದು.
3	ಬೆಂಗಳೂರು ಬಹುಮಹಡಿ ಕಟ್ಟಡದ 1ನೇ ಹಂತಕ್ಕೆ 01 ಸಂಖ್ಯೆ, 13 ಪ್ಯಾಸೇಂಜರ್ ಎಲಿವೇಟರ್ಸ್ ಒದಗಿಸುವುದು ಸ್ಥಾಪಿಸುವುದು, ಪರೀಕ್ಷಿಸಿ ಹಾಗೂ ಅನುವುಗೊಳಿಸುವುದು.	20.00	ಅಂದಾಜು ಪಟ್ಟಿ ತಯಾರಿಕೆ ಹಂತದಲ್ಲಿದ್ದು, ಈ ಕಾಮಗಾರಿಯನ್ನು ಸುಮಾರು 9 ತಿಂಗಳಲ್ಲಿ ಪೂರ್ಣ ಗೊಳಿಸಲಾಗುವುದು.
4	ಬೆಂಗಳೂರು ಬಹುಮಹಡಿ ಕಟ್ಟಡದ ಸಂಕೀರ್ಣದಲ್ಲಿ 2 ಸಂಖ್ಯೆ 1000 ಕೆವಿಎ ಟ್ರಾನ್ಸ್ ಫಾರ್ಮರ್ಸ್‌ನ್ನು ಒದಗಿಸಿ ಸ್ಥಾಪಿಸಿ, ಪರೀಕ್ಷಿಸಿ ಹಾಗೂ ಅನುವುಗೊಳಿಸುವುದು.	30.00	ಅಂದಾಜು ಪಟ್ಟಿ ತಯಾರಿಕೆ ಹಂತದಲ್ಲಿದ್ದು, ಈ ಕಾಮಗಾರಿಯನ್ನು ಸುಮಾರು 9 ತಿಂಗಳಲ್ಲಿ ಪೂರ್ಣ ಗೊಳಿಸಲಾಗುವುದು.
5	ಬಹುಮಹಡಿ ಕಟ್ಟಡದ (ಎಂ.ಎಸ್) 5ನೇ ಸ್ಟೇಜ್‌ಗಳ 100 KWP (ಕಿಲೋ ವ್ಯಾಟ್ ಪವರ್) ಕಾಮಗಾರಿಗಳು	1375.00	ಅಂದಾಜು ಪಟ್ಟಿ ತಯಾರಿಕೆ ಹಂತದಲ್ಲಿದ್ದು, ಈ ಕಾಮಗಾರಿಯನ್ನು ಸುಮಾರು 12 ತಿಂಗಳಲ್ಲಿ ಪೂರ್ಣ ಗೊಳಿಸಲಾಗುವುದು.
6	ಬೆಂಗಳೂರು ನಿರ್ದೇಶನಾಲಯದ ಮುಖ್ಯ ಕಟ್ಟಡಕ್ಕೆ ವಿಶೇಷ ದುರಸ್ತಿ ಮತ್ತು ಅಭಿವೃದ್ಧಿ ಕಾಮಗಾರಿ.	25.00	ಅಂದಾಜು ಪಟ್ಟಿ ತಯಾರಿಕೆ ಹಂತದಲ್ಲಿದ್ದು, ಈ ಕಾಮಗಾರಿಯನ್ನು ಸುಮಾರು 9 ತಿಂಗಳಲ್ಲಿ ಪೂರ್ಣ ಗೊಳಿಸಲಾಗುವುದು.

7	ಬೆಂಗಳೂರು ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್ ಸಿ.ಡಿ.ಡಿ ಎಂ. ಬ್ಲಾಕ್ ಮೇಲೆ 3 ಮಹಡಿಗಳ ನಿರ್ಮಾಣ.	130.00	ಅಂದಾಜು ಪಟ್ಟಿ ತಯಾರಿಕೆ ಹಂತದಲ್ಲಿದ್ದು, ಈ ಕಾಮಗಾರಿಯನ್ನು ಸುಮಾರು 12 ತಿಂಗಳಲ್ಲಿ ಪೂರ್ಣ ಗೊಳಿಸಲಾಗುವುದು.
8	ಬೆಂಗಳೂರು ಸರ್ಕಾರಿ ಜಿ.ಆರ್.ಐ.ಸಿ.ಪಿ. ಕಟ್ಟಡದ 2ನೇ ಮಹಡಿ ಯಲ್ಲಿ ಪ್ಯಾರಾಪೆಟ್ ಕಾಂಪೌಂಡ್ ನಿರ್ಮಾಣ ಹಾಗೂ ಸಂಪ್ ಮತ್ತು ಓವರ್ ಹೆಡ್ ಟ್ಯಾಂಕ್ ನಿರ್ಮಾಣ ಕಾಮಗಾರಿ.	1.00	ಅಂದಾಜು ಪಟ್ಟಿ ತಯಾರಿಕೆ ಹಂತದಲ್ಲಿದ್ದು, ಈ ಕಾಮಗಾರಿಯನ್ನು ಸುಮಾರು 6 ತಿಂಗಳಲ್ಲಿ ಪೂರ್ಣ ಗೊಳಿಸಲಾಗುವುದು.
9	ಬೆಂಗಳೂರಿನ ಎಸ್.ಜೆ.ಪಿ. ಸೈನ್ಸ್ ಲ್ಯಾಬರೇಟರಿಯಲ್ಲಿ ವಾಶ್ ಬೇಸಿನ್ ಒದಗಿಸುವುದು ಮತ್ತು ಪ್ರಯೋಗಾಲಯಗಳ ಶೌಚಾಲಯಕ್ಕೆ ವಿಶೇಷ ದುರಸ್ತಿ	7.79	ಅಂದಾಜು ಪಟ್ಟಿ ತಯಾರಿಕೆ ಹಂತದಲ್ಲಿದ್ದು, ಈ ಕಾಮಗಾರಿಯನ್ನು ಸುಮಾರು 6 ತಿಂಗಳಲ್ಲಿ ಪೂರ್ಣ ಗೊಳಿಸಲಾಗುವುದು.
10	ಬೆಂಗಳೂರಿನ ಟೆಕ್ಸ್‌ಟೈಲ್ಸ್ ಟೆಕ್ನಾಲಜಿ ಇನ್‌ಸ್ಟಿಟ್ಯೂಟ್ ನಲ್ಲಿರುವ ಪಾಲಿಟೆಕ್ನಿಕ್ ಕಟ್ಟಡಕ್ಕೆ ವಿಶೇಷ ದುರಸ್ತಿ	7.00	ಅಂದಾಜು ಪಟ್ಟಿ ತಯಾರಿಕೆ ಹಂತದಲ್ಲಿದ್ದು, ಈ ಕಾಮಗಾರಿಯನ್ನು ಸುಮಾರು 6 ತಿಂಗಳಲ್ಲಿ ಪೂರ್ಣ ಗೊಳಿಸಲಾಗುವುದು.
11	ಬೆಂಗಳೂರಿನ ತಾಂತ್ರಿಕ ಮುದ್ರಣ ಸಂಸ್ಥೆಯ ಪಾಲಿಟೆಕ್ನಿಕ್ ಕಟ್ಟಡಕ್ಕೆ ವಿಶೇಷ ದುರಸ್ತಿ.	15.00	ಅಂದಾಜು ಪಟ್ಟಿ ತಯಾರಿಕೆ ಹಂತದಲ್ಲಿದ್ದು, ಈ ಕಾಮಗಾರಿಯನ್ನು ಸುಮಾರು 6 ತಿಂಗಳಲ್ಲಿ ಪೂರ್ಣ ಗೊಳಿಸಲಾಗುವುದು.

	ಇಎಸ್ಐ ಕಟ್ಟಡಗಳ ವಿಭಾಗ	ಯಾವುದು ಇರುವುದಿಲ್ಲ	
	ನಂ.2ನೇ ಕಟ್ಟಡಗಳ ವಿಭಾಗ		
12	ಬೆಂಗಳೂರಿನ ನೃಪತುಂಗ ರಸ್ತೆಯಲ್ಲಿರುವ ಎಂಎಂ ಕೋರ್ಟ್ ಪೂರಕ ಕಟ್ಟಡ ನಿರ್ಮಾಣ ಕಾಮಗಾರಿ(ಮೊದಲನೇ ಹಂತ)	150.00	ಅಂದಾಜು ಪಟ್ಟಿ ತಯಾರಿಕೆ ಹಂತದಲ್ಲಿದ್ದು, ಈ ಕಾಮಗಾರಿಯನ್ನು ಸುಮಾರು 12 ತಿಂಗಳಲ್ಲಿ ಪೂರ್ಣ ಗೊಳಿಸಲಾಗುವುದು.
13	ಬೆಂಗಳೂರಿನ ಸಿಟಿ ಸಿವಿಲ್ ಕೋರ್ಟ್ ಆವರಣದಲ್ಲಿ ಕಾರ್ ಪಾರ್ಕಿಂಗ್ ಕಟ್ಟಡ ನಿರ್ಮಾಣ ಕಾಮಗಾರಿ (ತಳ ನೆಲ ಮತ್ತು ಮೊದಲನೆ ಮಹಡಿ)	450.00	ಅಂದಾಜು ಪಟ್ಟಿ ತಯಾರಿಕೆ ಹಂತದಲ್ಲಿದ್ದು, ಈ ಕಾಮಗಾರಿಯನ್ನು ಸುಮಾರು 15 ತಿಂಗಳಲ್ಲಿ ಪೂರ್ಣ ಗೊಳಿಸಲಾಗುವುದು.
14	ಬೆಂಗಳೂರು ಎಂಜಿ ರಸ್ತೆಯಲ್ಲಿರುವ ಮೇಯೋಹಾಲ್ ನವೀಕರಣ ಕಾಮಗಾರಿ	100.00	ಅಂದಾಜು ಪಟ್ಟಿ ತಯಾರಿಕೆ ಹಂತದಲ್ಲಿದ್ದು, ಈ ಕಾಮಗಾರಿಯನ್ನು ಸುಮಾರು 12 ತಿಂಗಳಲ್ಲಿ ಪೂರ್ಣ ಗೊಳಿಸಲಾಗುವುದು.
15	ಸಿಟಿ ಸಿವಿಲ್ ಕೋರ್ಟ್‌ನ ಆವರಣದಲ್ಲಿ 2 ಸಂಖ್ಯೆಯ 10 ಜನ ಸಾಮರ್ಥ್ಯವುಳ್ಳ ಎಲಿವೇಟರ್ಸ್‌ಗಳನ್ನು ಒದಗಿಸಿ ಅಳವಡಿಸಿ ಚಾಲನೆಗೊಳಿಸುವುದು ಹಾಗೂ 20 ಜನ ಚಲಿಸಬಹುದಾದ ಎಲಿವೈಟರ್ಸ್‌ಗಳಿಗೆ ಸ್ಟ್ರಕ್ಚರಲ್ ಗ್ಲೇಜಿಂಗ್ ಅಳವಡಿಸುವ ಕಾಮಗಾರಿ	50.00	ಅಂದಾಜು ಪಟ್ಟಿ ತಯಾರಿಕೆ ಹಂತದಲ್ಲಿದ್ದು, ಈ ಕಾಮಗಾರಿಯನ್ನು ಸುಮಾರು 12 ತಿಂಗಳಲ್ಲಿ ಪೂರ್ಣ ಗೊಳಿಸಲಾಗುವುದು.

16	ಬೆಂಗಳೂರು ಕಾವೇರಿ ಅತಿಥಿಗೃಹದಲ್ಲಿ 250 ಕೆವಿಎ ಹೆಚ್ ಟಿ ಸಬ್‌ಸ್ಟೇಶನ್ ಒದಗಿಸಿ ಅಳವಡಿಸಿ ಚಾಲನೆ ಗೊಳಿಸುವ ಕಾಮಗಾರಿ	12.00	ಅಂದಾಜು ಪಟ್ಟಿ ತಯಾರಿಕೆ ಹಂತದಲ್ಲಿದ್ದು, ಈ ಕಾಮಗಾರಿಯನ್ನು ಸುಮಾರು 9 ತಿಂಗಳಲ್ಲಿ ಪೂರ್ಣ ಗೊಳಿಸಲಾಗುವುದು.
17	ಬೆಂಗಳೂರು ಕೋರಮಂಗಲದಲ್ಲಿ ರಾಷ್ಟ್ರೀಯ ಕ್ರೀಡಾ ಗ್ರಾಮದಲ್ಲಿ ವಸತಿಗೃಹಗಳ ನಿರ್ಮಾಣ ಕಾಮಗಾರಿ	300.00	ಅಂದಾಜು ಪಟ್ಟಿ ತಯಾರಿಕೆ ಹಂತದಲ್ಲಿದ್ದು, ಈ ಕಾಮಗಾರಿಯನ್ನು ಸುಮಾರು 15 ತಿಂಗಳಲ್ಲಿ ಪೂರ್ಣ ಗೊಳಿಸಲಾಗುವುದು.
18	ಬೆಂಗಳೂರಿನ ಸಿಟಿ ಸಿವಿಲ್ ಕೋರ್ಟ್ ಆವರಣದಲ್ಲಿ ಕಾನೂನು ಕೊಠಡಿಗಳ ಸಂಕೀರ್ಣ ನಿರ್ಮಾಣ ಕಾಮಗಾರಿ	100.00	ಅಂದಾಜು ಪಟ್ಟಿ ತಯಾರಿಕೆ ಹಂತದಲ್ಲಿದ್ದು, ಈ ಕಾಮಗಾರಿಯನ್ನು ಸುಮಾರು 12 ತಿಂಗಳಲ್ಲಿ ಪೂರ್ಣ ಗೊಳಿಸಲಾಗುವುದು.
19	ಬೆಂಗಳೂರಿನ ಎಂಎಂ ಕೋರ್ಟ್ ಆವರಣದಲ್ಲಿ ಕಾನೂನು ಕೊಠಡಿಗಳ ಸಂಕೀರ್ಣ ನಿರ್ಮಾಣ ಕಾಮಗಾರಿ.	100.00	ಅಂದಾಜು ಪಟ್ಟಿ ತಯಾರಿಕೆ ಹಂತದಲ್ಲಿದ್ದು, ಈ ಕಾಮಗಾರಿಯನ್ನು ಸುಮಾರು 12 ತಿಂಗಳಲ್ಲಿ ಪೂರ್ಣ ಗೊಳಿಸಲಾಗುವುದು.
20	ಬೆಂಗಳೂರಿನ ಸಿಟಿ ಸಿವಿಲ್ ಕೋರ್ಟ್ ಆವರಣದಲ್ಲಿ ಸಾಕ್ಷಿದಾರರ ತಂಗುದಾಣ (ವಿಟ್‌ನೆಸ್ ಲಾಂಜ್) ನಿರ್ಮಾಣ ಕಾಮಗಾರಿ	50.00	ಅಂದಾಜು ಪಟ್ಟಿ ತಯಾರಿಕೆ ಹಂತದಲ್ಲಿದ್ದು ಈ ಕಾಮಗಾರಿಯನ್ನು ಸುಮಾರು 12 ತಿಂಗಳಲ್ಲಿ ಪೂರ್ಣ ಗೊಳಿಸಲಾಗುವುದು.
21	ಬೆಂಗಳೂರಿನ ಎಂಎಂ ಕೋರ್ಟ್ ಆವರಣದಲ್ಲಿ ಸಾಕ್ಷಿದಾರರ ತಂಗುದಾಣ (ವಿಟ್‌ನೆಸ್ ಲಾಂಜ್) ನಿರ್ಮಾಣ ಕಾಮಗಾರಿ	50.00	ಅಂದಾಜು ಪಟ್ಟಿ ತಯಾರಿಕೆ ಹಂತದಲ್ಲಿದ್ದು ಈ ಕಾಮಗಾರಿಯನ್ನು ಸುಮಾರು 12 ತಿಂಗಳಲ್ಲಿ ಪೂರ್ಣ ಗೊಳಿಸಲಾಗುವುದು.

22	ಗ್ರೂಪ್ –ಸಿ ಮತ್ತು ಗ್ರೂಪ್ –ಡಿ ವಸತಿಗೃಹಗಳ ಕಟ್ಟಡ ನಿರ್ಮಾಣ ಕಾಮಗಾರಿ	1400.00	ಕಾಮಗಾರಿಯ ಅಂದಾಜು ತಯಾರಿಕೆಯ ಹಂತದಲ್ಲಿದ್ದು ಸುಮಾರು 24 ತಿಂಗಳುಗಳಲ್ಲಿ ಪೂರ್ಣ ಗೊಳಿಸಲಾಗುವುದು.

4807(5327) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು(ಶಿವಾಜಿನಗರ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಕಳ್ಳಭಟ್ಟಿ ದುರಂತದ ಪ್ರಕರಣಗಳೆಷ್ಟು?

ಆ) ಇದುವರೆಗೂ ಈ ಪ್ರಕರಣಗಳಲ್ಲಿ ಸಾವಿಗೀಡಾದವರ ಸಂಖ್ಯೆ ಎಷ್ಟು? ಜಿಲ್ಲಾವಾರು ವಿವರ ನೀಡುವುದು;

ಇ) ಈ ದುರಂತದಲ್ಲಿ ಸಾವಿಗೀಡಾದವರಿಗೆ ಸರ್ಕಾರದಿಂದ ಪರಿಹಾರ ನೀಡಲಾಗಿದೆಯೇ?

ಈ) ಕಳ್ಳಭಟ್ಟಿ ದುರಂತಕ್ಕೆ ಕಾರಣಗಳೇನು? ಇದಕ್ಕೆ ಕಾರಣರಾದವರ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಉ) ಈ ಪ್ರಕರಣದ ತಪ್ಪಿತಸ್ಥರು ಯಾರೆಂದು ಗುರುತಿಸ ಲಾಗಿದೆಯೇ? ಹಾಗಿದ್ದಲ್ಲಿ ಸರ್ಕಾರ ಅವರ ಮೇಲೆ ಕೈಗೊಂಡ ಕ್ರಮಗಳೇನು;

ಊ) ಈ ದುರಂತಗಳ ಬಗ್ಗೆ ವಿಚಾರಣೆ ನಡೆಸಲಾಗುತ್ತಿದೆಯೇ; ತನಿಖೆ ಯಾವ ಹಂತದಲ್ಲಿದೆ, ವಿವರ ಒದಗಿಸವುದು;

ಋ) ಈ ಪ್ರಕರಣ ಪುನ: ಜರುಗದಂತೆ ಸರ್ಕಾರ ಯಾವ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವುದು;

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು):

ಅ)ಕಳೆದ 3 ವರ್ಷಗಳಲ್ಲಿ ಒಟ್ಟು 08 ಕಳ್ಳಭಟ್ಟಿ ದುರಂತಗಳು ಸಂಭವಿಸಿರುತ್ತವೆ.

ಆ) ಇದುವರೆಗೂ ಈ ಪ್ರಕರಣದಲ್ಲಿ ಸಾವಿಗೀಡಾದವರ ಸಂಖ್ಯೆ 54. ಜಿಲ್ಲಾವಾರು ವಿವರ ಈ ಕೆಳಕಂಡಂತೆ ಇರುತ್ತದೆ.

1. ಬೆಂಗಳೂರು ನಗರ ಜಿಲ್ಲೆ	–	23
2. ಬೆಂಗಳೂರು (ಗ್ರಾ) ಜಿಲ್ಲೆ	–	09
3. ಹಾಸನ ಜಿಲ್ಲೆ	–	22
ಒಟ್ಟು	–	54